

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18–03–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್(ರ)ರ ಜೀವಿತದ ಪ್ರಸ್ತಾಪದಲ್ಲಿ ಝಕಾತ್ ನೀಡುವುದನ್ನು ನಿರಾಕರಿಸಿದವರ ಕುರಿತು ತಾರೀಖ್ ತಬರಿಯಲ್ಲಿ ವರದಿಯಾಗಿದೆ. ಸುಳ್ಳು ಪ್ರವಾದಿಯಾದ ತುಲೈಹ ಬಿನ್ ಖುವೈಲದ್‌ರ ಜೊತೆಗೆ ಒಟ್ಟುಸೇರಿದ ಅಸದ್, ಗ್ರತ್‌ಫಾನ್ ಮತ್ತು ತೈ ಗೋತ್ರದವರು ಹಾಗೂ ಫಝಾರ, ಸಅ್‌ಲಬ ಬಿನ್ ಸಅದ್, ಮುರ್ರ, ಅಬಸ್, ಬನೂ ಕನಾನ, ಧುಲ್‌ಖಿಸ್ಸಾ, ಲೈಸ್, ದೀಲ್ ಮತ್ತು ಮದಾಲಿಜ್ ಗೋತ್ರದ ಸಂಘಗಳು ಮದೀನಕ್ಕೆ ಬಂದುವು. ಸಂಘದಲ್ಲಿದ್ದವರು ಹಝ್ರತ್ ಅಬ್ಬಾಸ್ ಹೊರತುಪಡಿಸಿ ಮದೀನದ ಇತರ ನೇತಾರರ ಬಳಿ ತಂಗಿದರು. ಅವರು, ತಾವು ನಮಾಝ್ ಮಾಡುವೆವು ಆದರೆ ಝಕಾತ್ ನೀಡಲಾರೆವು ಎಂಬ ಸಂದೇಶದೊಂದಿಗೆ ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಅಬೂಬಕರ್(ರ) ಹೇಳಿದರು: ಈ ಒಂಟೆಯನ್ನು ಕಟ್ಟುವ ಹಗ್ಗವನ್ನು ಕೂಡ ಝಕಾತಾಗಿ ಕೊಡದಿದ್ದರೆ ನಾನು ಅಂಥವರೊಡನೆ ಜಿಹಾದ್ ಮಾಡುವೆನು. ಹಝ್ರತ್ ಅಬೂಬಕರ್(ರ)ರ ದೃಢನಿರ್ಧಾರವನ್ನು ನೋಡಿದಾಗ ಆ ಸಂಘದವರು ಮದೀನದಿಂದ ಮರಳಿ ಹೋದರು.

ಒಬ್ಬ ಚರಿತ್ರೆಗಾರ ಹೀಗೆ ಬರೆಯುತ್ತಾರೆ: ಆ ಸಂಘದವರು ಮದೀನದಿಂದ ಹೊರಡುವಾಗ ಎರಡು ಸಂಗತಿಗಳು ಅವರ ಮನಸ್ಸಲ್ಲಿ ಇದ್ದುವು. ಒಂದು, ಝಕಾತ್ ನಿರಾಕರಣೆಯ ವಿಷಯದಲ್ಲಿ ಖಲೀಫ ತನ್ನ ಅಭಿಪ್ರಾಯ ಮತ್ತು ದೃಢನಿರ್ಧಾರದಿಂದ ಹಿಂದೆ ಸರಿಯುವ ಯಾವುದೇ ಪ್ರತೀಕ್ಷೆ ಕಾಣುತ್ತಿಲ್ಲ. ಎರಡನೆಯದಾಗಿ, ಮುಸ್ಲಿಮರ ದೌರ್ಬಲ್ಯದಿಂದ ಮತ್ತು ಮುಸ್ಲಿಮರು ಸಂಖ್ಯೆಯಲ್ಲಿ ಕಡಿಮೆ ಇರುವುದರಿಂದ ಅದರ ಲಾಭ ಪಡೆಯುತ್ತಾ ಇಸ್ಲಾಮಿನ ಆಡಳಿತ ಉರುಳಿ ಬೀಳುವ ರೀತಿಯಲ್ಲಿ ಮದೀನದ ಮೇಲೆ ಶಕ್ತವಾದ ದಾಳಿ ನಡೆಸುವುದು. ಹಝ್ರತ್ ಅಬೂಬಕರ್(ರ) ಸಹ ಅಜಾಗರೂಕರಾಗಿರಲಿಲ್ಲ. ಅವರು ಮದೀನದ ಎಲ್ಲ ಮೂಲೆಗಳಲ್ಲೂ ಕಾವಲುಗಾರರನ್ನು ನಿಶ್ಚಯಿಸಿದರು. ಮೂರು ರಾತ್ರಿಗಳು ದಾಟಿ ಹೋಗುವಷ್ಟರಲ್ಲಿ ಝಕಾತ್ ನಿಷೇಧಿಗಳು ಮದೀನದ ಮೇಲೆ ರಾತ್ರಿ ವೇಳೆ ಹಲ್ಲೆ ನಡೆಸಿದರು. ಆದರೆ ಶತ್ರುಗಳು ಪರಾಜಿತರಾಗಿ ಹಿಂದೆ ಸರಿಯುವಂತೆ ಮುಸ್ಲಿಮರು ಮಾಡಿದರು.

ಮದೀನದಿಂದ ನಲ್ವತ್ತು ಮೈಲುಗಳಷ್ಟು ದೂರದಲ್ಲಿ ಧುಲ್‌ಖಿಸ್ಸಾ ಎಂಬ ಪ್ರದೇಶದಲ್ಲಿದ್ದ ಅವರ ಸಹಾಯಕರಾದ ದಾಳಿಗಾರರು ಅವರ ಸಹಾಯಕ್ಕಾಗಿ ಬಂದರು. ಈ ವೇಳೆ ಹಝ್ರತ್ ಅಬೂಬಕರ್(ರ) ಕೂಡ ತನ್ನ ಸೈನ್ಯದ ತಯಾರಿಯಲ್ಲಿ ನಿರತರಾಗಿದ್ದರು. ತಡರಾತ್ರಿಯ ಸಮಯದಲ್ಲಿ ತೀವ್ರ ಯುದ್ಧ ನಡೆಯಿತು ಮತ್ತು ಬೆಳಿಗ್ಗೆಯಾಗುವುದಕ್ಕೆ ಮುಂಚಿತವಾಗಿಯೇ ಎದುರಾಳಿಗಳು ಪರಾಜಿತರಾಗಿ ಪರಾರಿಯಾದರು. ಇದು ಅಲ್ಲಾಹನು ಮುಸ್ಲಿಮರಿಗೆ ನೀಡಿದ ಮೊದಲ ವಿಜಯವಾಗಿತ್ತು. ಒಬ್ಬ ಲೇಖಕ ಈ ಯುದ್ಧವನ್ನು ಬದ್ರ್ ಯುದ್ಧದೊಂದಿಗೆ ಹೋಲಿಸಿ ಬರೆಯುತ್ತಾರೆ: ಈ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಪ್ರಕಟಿಸಿದ ನಂಬಿಕೆ, ದೃಢವಿಶ್ವಾಸ, ದೃಢನಿರ್ಧಾರ ಮತ್ತು ಸ್ಥೈರ್ಯದ ಕಾರಣದಿಂದ ಮುಸ್ಲಿಮರ ಹೃದಯದಲ್ಲಿ ಹಝ್ರತ್ ಪೈಗಂಬರ್(ಸ)ರ ಕಾಲಘಟ್ಟದ ಯುದ್ಧಗಳ ನೆನಪು ತಾಜಾಗೊಂಡಿತು. ಯಾವ ರೀತಿಯಲ್ಲಿ ಬದ್ರ್ ಯುದ್ಧದಿಂದ ದೀರ್ಘಕಾಲದ ಪರಿಣಾಮಗಳು ಉಂಟಾಗಿದ್ದುವೋ ಅದೇ ರೀತಿಯಲ್ಲಿ ಈ ಯುದ್ಧದಲ್ಲಿ ಮುಸ್ಲಿಮರ ವಿಜಯವು ಸಹ ಇಸ್ಲಾಮಿನ ಭವಿಷ್ಯದ ಮೇಲೆ ಆಳವಾದ ಪ್ರಭಾವ ಬೀರಿತು.

ಬನೂ ಧಬ್‌ಯಾನ್, ಬನೂ ಅಬಸ್ ಮತ್ತು ಇತರ ಗೋತ್ರಗಳು ಈ ಪರಾಜಯದಿಂದ ಕೋಪಗೊಂಡು ತಮ್ಮ ಬಳಿಯಲ್ಲಿದ್ದ ಮುಸ್ಲಿಮರ ಮೇಲೆ ಅಚಾನಕ್ಕಾದ ದಾಳಿ ನಡೆಸಿ ಅವರನ್ನು ಅತ್ಯಂತ ದಾರುಣವಾಗಿ ವಿವಿಧ ರೀತಿಯ ಪೀಡನೆಗಳಿಗೆ ಗುರಿಪಡಿಸಿ ಶಹೀದ್ ಮಾಡಿದರು. ಈ ದೌರ್ಜನ್ಯಗಳ ಬಗ್ಗೆ ಹಝ್ರತ್ ಅಬೂಬಕರ್(ರ)ರಿಗೆ ಗೊತ್ತಾದಾಗ, ಪ್ರತಿ ಗೋತ್ರಗಳಿಂದ ಮುಸ್ಲಿಮರ ಕೊಲೆಗಾರರನ್ನು ಪ್ರತೀಕಾರವಾಗಿ ವಧಿಸಲಾಗುವುದು ಎಂದು ಅವರು ಪಣತೊಟ್ಟರು. ಹಝ್ರತ್ ಅಬೂಬಕರ್(ರ)ರ ನೇತೃತ್ವದಲ್ಲಿ ಝಕಾತ್ ನಿಷೇಧಿಗಳ ದಾಳಿಗಳನ್ನು ಪೂರ್ಣವಾಗಿ ತಡೆಯಲಾದಾಗ ಇತರ ಚಂಚಲಚಿತ್ತರಾದ ಗೋತ್ರಗಳು ಒಂದರ ನಂತರ ಇನ್ನೊಂದರಂತೆ ಝಕಾತನ್ನು ತೆಗೆದುಕೊಂಡು ಮದೀನದ ಕಡೆಗೆ ಬರಲು ಶುರುಮಾಡಿದುವು. ಹೀಗೆ ಆ ಕಾಲದಲ್ಲಿ ಮುಸ್ಲಿಮರ ಆವಶ್ಯಕತೆಗಳಿಗಿಂತ ಹೆಚ್ಚಿನ ಝಕಾತಿನ ಸಂಪತ್ತು ಮದೀನಕ್ಕೆ ಬಂತು.

ಪರಾಜಿತರಾದ ಗೋತ್ರಗಳ ವರ್ತನೆ ಬಗ್ಗೆ ಮತ್ತೊಬ್ಬ ಲೇಖಕ ಬರೆಯುತ್ತಾರೆ: ಅಬಸ್, ಧಬ್‌ಯಾನ್, ಗ್ರತ್‌ಫಾನ್, ಬನೀ ಬಕರ್ ಮತ್ತು ಮದೀನದ ಸಮೀಪದಲ್ಲಿ ನೆಲೆಸಿದ ಇತರ ಬಂಡಾಯಗಾರರಾದ ಗೋತ್ರಗಳು ತಮ್ಮ ಹಟ ಮತ್ತು ದಂಗೆಯಿಂದ ದೂರವಿದ್ದು ಹಝ್ರತ್ ಅಬೂಬಕರ್(ರ)ರ ಅನುಸರಣೆ ಮತ್ತು ಇಸ್ಲಾಮಿನ ಮೂಲಭೂತ ಕಾರ್ಯಗಳನ್ನು ಮಾಡುವುದಾಗಿ ಒಪ್ಪುವುದು ಅವರಿಗೆ ಉತ್ತಮವಾಗಿತ್ತು. ಆದರೆ ಮುಸ್ಲಿಮರೊಡನೆ ಇದ್ದ ಶತ್ರುತ್ವವು ಅವರ ಕಣ್ಣುಗಳನ್ನು ಕುರುಡುಗೊಳಿಸಿತ್ತು. ಅವರು ತಮ್ಮ ಸ್ವದೇಶವನ್ನು ತ್ಯಜಿಸಿ ಬನೀ ಅಸದ್ ಗೋತ್ರದ ಸುಳ್ಳು ಪ್ರವಾದಿ ವಾದಿಯಾದ ತುಲೈಹ ಬಿನ್ ಖುವೈಲಿದ್‌ನೊಂದಿಗೆ ಸೇರಿದರು. ಈ ಜನರು ತಲುಪಿದ ಕಾರಣದಿಂದ ತುಲೈಹ ಮತ್ತು ಮುಸೈಲಿಮರ ಶಕ್ತಿ ಮತ್ತು ಸಾಮರ್ಥ್ಯ ವರ್ಧಿಸಿತು. ಯಮನಿನಲ್ಲಿ ವಿದ್ರೋಹದ ಬೆಂಕಿ ಶಕ್ತವಾಗಿ ಪ್ರಜ್ವಲಿಸಲು ಶುರುವಾಯಿತು. ಒಂದು ಮುಖ್ಯ ಸಂಗತಿಯೇನೆಂದರೆ, ಈ ಜನರು ದಂಗೆಯೆದ್ದಿದ್ದರು ಮತ್ತು ಯುದ್ಧ ಮಾಡಿದ್ದರು. ಕೇವಲ ಸುಳ್ಳು ಪ್ರವಾದಿತ್ವದ ವಾದದ ಕಾರಣದಿಂದ

ಈ ಜನರೊಡನೆ ಯುದ್ಧ ನಡೆದಿರಲಿಲ್ಲ. ದಂಗೆಯೆದ್ದುದಕ್ಕೆ ಮತ್ತು ಯುದ್ಧ ಮಾಡಿದ್ದಕ್ಕೆ ಪ್ರತೀಕಾರ ಮಾಡಲಾಗುತ್ತಿತ್ತು.

ಝಕಾತ್ ನಿರಾಕರಿಸಿದವರ ಮೇಲೆ ವಿಜಯ ಸಾಧಿಸಿದ ಬಗ್ಗೆ ಮತ್ತು ಹಝ್ರತ್ ಅಬೂಬಕರ್(ರ)ರ ಧೈರ್ಯ ಮತ್ತು ದೃಢನಿರ್ಧಾರದ ಕುರಿತು ಪ್ರಸ್ತಾಪಿಸುತ್ತಾ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಮರಣದ ನಂತರ ನಮ್ಮ ಸ್ಥಿತಿಯೇನಾಗಿತ್ತು ಎಂದರೆ, ಅಬೂಬಕರ್(ರ)ರ ಮೂಲಕ ಅಲ್ಲಾಹನು ನಮಗೆ ಸಹಾಯ ನೀಡದಿರುತ್ತಿದ್ದರೆ ಖಂಡಿತವಾಗಿಯೂ ನಾವು ನಾಶಹೊಂದುತ್ತಿದ್ದೆವು. ನಾವು ಝಕಾತಿನ ಒಂಟೆಗಳಿಗಾಗಿ ಇತರರ ವಿರುದ್ಧ ಯುದ್ಧ ಮಾಡಬಾರದು ಮತ್ತು ಅಲ್ಲಾಹನ ಆರಾಧನೆಯಲ್ಲಿ ನಿರತರಾಗಬೇಕು ಎಂಬುವುದಾಗಿತ್ತು ಮುಸ್ಲಿಮರಾದ ನಮ್ಮೆಲ್ಲರ ಒಮ್ಮತಾಭಿಪ್ರಾಯ. ಆದರೆ ಝಕಾತ್ ನೀಡದವರೊಡನೆ ಯುದ್ಧ ಮಾಡಲು ಹಝ್ರತ್ ಅಬೂಬಕರ್(ರ) ದೃಢನಿರ್ಧಾರ ಮಾಡಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ದೇವಭಕ್ತಿಯ ಪದವಿಗಳನ್ನು ವಿವರಿಸುತ್ತಾ ಹೇಳುತ್ತಾರೆ: ಝಕಾತ್ ಎಷ್ಟು ಮುಖ್ಯವೆಂದು ಅಹ್ಮದಿಯರು ನೆನಪಿನಲ್ಲಿಡಬೇಕು. ಅದನ್ನು ಕರಾರುವಕ್ಕಾಗಿ ನೀಡಬೇಕು. ನಮಾಝಿನ ಆದೇಶದ ನಂತರ ಅಲ್ಲಾಹನು ಝಕಾತ್ ಕೊಡಬೇಕೆಂಬ ಆದೇಶ ನೀಡಿದ್ದಾನೆ.

ಖಿಲಾಫತಿನ ಸ್ಥಾನಮಾನಕ್ಕೆ ಸಂಬಂಧಪಟ್ಟು ಒಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಝಕಾತ್ ಪಡೆಯಬೇಕು ಎಂಬ ಆದೇಶ ಹಝ್ರತ್ ಪೈಗಂಬರ್(ಸ)ರಿಗೆ ನೀಡಲಾಗಿತ್ತು ಎಂದೂ ಹಝ್ರತ್ ಪೈಗಂಬರ್(ಸ) ಮೃತಪಟ್ಟಿರುವಾಗ ಬೇರೆಯವರು ಝಕಾತ್ ಹೇಗೆ ಪಡೆಯುವುದು ಎಂದೂ ಹಝ್ರತ್ ಅಬೂಬಕರ್(ರ)ರ ವಿರುದ್ಧವಾಗಿ ಆರೋಪವೆತ್ತಲಾದಾಗ ಹಝ್ರತ್ ಅಬೂಬಕರ್(ರ) ಹೀಗೆ ಉತ್ತರಿಸಿದರು: ಹಝ್ರತ್ ಪೈಗಂಬರ್(ಸ) ನಿಧನರಾಗಿರುವರು ಎಂಬುದು ಸರಿಯೇ ಆಗಿದೆ. ಆದರೆ ಶರೀಅತ್ ನೆಲೆನಿಂತಿದೆ. ಹಾಗಾಗಿ ಈಗ ಆ ಆದೇಶ ಖಲೀಫರಿಗೆ ಅನ್ವಯವಾಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆದ್ದರಿಂದ ಅದಕ್ಕೆ ಒಮ್ಮತಾಭಿಪ್ರಾಯ ಹೊಂದಿಕೊಂಡು ನಾನು ಹೇಳುತ್ತೇನೆ: ಇಂದು ನಾನು ಅದಕ್ಕೆ ಸಂಬೋಧಿತನಾಗಿರುವೆನು ಮತ್ತು ಈ ತತ್ವವೇ ಸದಾ ಖಿಲಾಫತಿನ ಜೊತೆಗೆ ಇರುವುದು.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಸಂದರ್ಭದಲ್ಲಿ ಹೀಗೆಯೂ ಹೇಳಿದರು: ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಕೇವಲ ಮೂರು ಮಸೀದಿಗಳಲ್ಲಿ ಜಮಾಅತಾದ ನಮಾಝ್ ನಡೆಯುತ್ತಿತ್ತು ಎಂದು ಚರಿತ್ರೆಯಲ್ಲಿ ಬಂದಿದೆ. ದೇಶದ ಬಹುತೇಕ ಜನರು ಝಕಾತ್ ನೀಡುವುದನ್ನು ನಿರಾಕರಿಸಿದ್ದರು. ಹಝ್ರತ್ ಪೈಗಂಬರ್(ಸ)ರ ನಂತರ ನಮ್ಮಿಂದ ಝಕಾತ್ ಪಡೆಯಲು ಯಾರಿಗೆ ಹಕ್ಕಿದೆ ಎಂದು ಅವರು ಕೇಳುತ್ತಿದ್ದರು. ಝಕಾತಿನ ವಿಷಯದ ಭಿನ್ನಾಭಿಪ್ರಾಯದ ಕಾರಣದಿಂದ ಅರೇಬಿಯದ ಸಾವಿರಾರು ಜನರು ಧರ್ಮತ್ಯಾಗ ಮಾಡಿದ್ದರು. ಒಂದು ಲಕ್ಷದ ಸೈನ್ಯದೊಂದಿಗೆ ಮುಸೈಲಿಮ ಆಕ್ರಮಣ ನಡೆಸಲು ಬರುತ್ತಿದ್ದಾನೆ ಎಂಬ ಸುದ್ದಿ ಹಝ್ರತ್ ಅಬೂಬಕರ್(ರ)ರಿಗೆ ತಲುಪಿತು. ಈ ಸ್ಥಿತಿಯಲ್ಲಿ ನೀವು ಝಕಾತ್ ನೀಡಬೇಕೆಂಬ ಬೇಡಿಕೆ ಇರಿಸಬೇಡಿರಿ ಮತ್ತು ಜನರೊಡನೆ ರಾಜಿಮಾಡಿಕೊಳ್ಳಿರಿ ಎಂದು ಕೆಲವು ಸಹಾಬಿಯರು ಹಝ್ರತ್ ಅಬೂಬಕರ್(ರ)ರಿಗೆ ಸಲಹೆ ಕೊಟ್ಟರು. ಆದರೆ ಹಝ್ರತ್ ಅಬೂಬಕರ್(ರ) ಹೇಳಿದರು: ಝಕಾತ್ ನೀಡುವುದಾಗಿ ಈ ಜನರು ಒಪ್ಪುವ ವರೆಗೂ ನಾನು ಅವರೊಡನೆ ರಾಜಿ ಮಾಡುವುದಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನೈಜ ವಿಶ್ವಾಸದ ಲಕ್ಷಣ ಇದೇ ಆಗಿದೆ. ಇದೇ ವಿಶ್ವಾಸ ನಮ್ಮೊಳಗೆ ಉಂಟಾದರೆ, ನಾವು ಲೋಕದಲ್ಲಿ ಇಸ್ಲಾಮಿನ ಯಥಾರ್ಥ ಸಂದೇಶ ತಲುಪಿಸಬಹುದು ಮತ್ತು ವಿಜಯ ಸಾಧಿಸಬಹುದು – ಇನ್‌ಶಾ ಅಲ್ಲಾಹ್. ಅವರು ಹೇಳುತ್ತಾರೆ: ನಿಜವಾದ ಸಂಗತಿ ಇದೇ ಆಗಿದೆ. ಯಾವ ರೀತಿಯಲ್ಲಿ ನಮಾಝ್ ಮತ್ತು ಉಪವಾಸದ ಆಜ್ಞೆಗಳು ಹಝ್ರತ್ ಪೈಗಂಬರ್(ಸ)ರ ನಿಧನದೊಂದಿಗೆ ಕೊನೆಗೊಳ್ಳುವುದಿಲ್ಲವೋ ಅದೇ ರೀತಿಯಲ್ಲಿ ಸಮುದಾಯ ಮತ್ತು ರಾಷ್ಟ್ರದೊಂದಿಗೆ ಸಂಬಂಧಪಟ್ಟ ಆದೇಶಗಳು ಕೂಡ ಹಝ್ರತ್ ಪೈಗಂಬರ್(ಸ)ರ ನಿಧನದೊಂದಿಗೆ ಮುಕ್ತಾಯಗೊಳ್ಳುವುದಿಲ್ಲ. ಬಾಜಮಾಅತ್ ನಮಾಝಿನ ಹಾಗೆಯೇ ಈ ಆದೇಶಗಳನ್ನು ಸಹ ಸದಾ ಮುಸ್ಲಿಮರ ಎಡೆಯಲ್ಲಿ ಜಾರಿಗೊಳಿಸುವುದು ಹಝ್ರತ್ ಪೈಗಂಬರ್(ಸ)ರ ಪ್ರತಿನಿಧಿಗಳ ಕರ್ತವ್ಯವಾಗಿದೆ.

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆಯೂ ಹೇಳಿದರು: ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಕೇವಲ ಮಕ್ಕ, ಮದೀನ ಮತ್ತು ಇನ್ನೊಂದು ಸಣ್ಣ ಗ್ರಾಮ ಹೊರತುಪಡಿಸಿ ಅರೇಬಿಯರೆಲ್ಲರೂ ಒಂದೇ ಸವನೆ ಧರ್ಮತ್ಯಾಗ ಮಾಡಿದರು. ಇತರ ಎಲ್ಲ ಪ್ರದೇಶಗಳ ಜನರು ಝಕಾತ್ ನೀಡುವುದನ್ನು ನಿರಾಕರಿಸಿದರು. ಅವರು ಸೈನ್ಯದೊಂದಿಗೆ ಹೋರಾಡಲು ಹೊರಟರು. ಕೆಲವು ಜಾಗಗಳಲ್ಲಿ ಅವರ ಬಳಿ ಒಂದು ಲಕ್ಷದಷ್ಟು ಸೈನಿಕರಿದ್ದರು. ಆದರೆ ಮತ್ತೊಂದೆಡೆ ಕೇವಲ ಹತ್ತು ಸಾವಿರ ಸೈನಿಕರ ಸೈನ್ಯವಿತ್ತು. ಅದನ್ನು ಹಝ್ರತ್ ಪೈಗಂಬರ್(ಸ) ತನ್ನ ನಿಧನಕ್ಕೆ ಸ್ವಲ್ಪ ಮುಂಚಿತವಾಗಿ ಹಝ್ರತ್ ಉಸಾಮರ ನೇತೃತ್ವದಲ್ಲಿ ರೋಮಿನ ಪ್ರದೇಶದ ಮೇಲೆ ದಾಳಿ ನಡೆಸಲಿಕ್ಕಾಗಿ ತಯಾರು ಮಾಡಿದ್ದರು. ದುರ್ಬಲರು, ವೃದ್ಧರು ಮತ್ತು ಬೆರಳೆಣಿಕೆಯ ಕೆಲವು ಯುವಕರು ಮಾತ್ರ ಮದೀನದಲ್ಲಿ ಉಳಿದಿದ್ದರು. ಈ ಸ್ಥಿತಿಯನ್ನು ಕಂಡು ಶ್ರೇಷ್ಠ ಸಹಾಬಿಯರ ಒಂದು ಸಂಘ ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ, ದಂಗೆ ಕೊನೆಗೊಳ್ಳುವ ತನಕ ಈ ಸೈನ್ಯವನ್ನು ತಡೆದು ನಿಲ್ಲಿಸಬೇಕು ಎಂದು ವಿನಂತಿಸಿದರು. ಹಝ್ರತ್ ಅಬೂಬಕರ್(ರ) ಅತ್ಯಂತ ಕೋಪದಿಂದ ಹೇಳಿದರು: ಯಾವ ಸೈನ್ಯವನ್ನು ರವಾನೆ ಮಾಡಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದರೋ ಅದನ್ನು ತಡೆಯುವ ಕೆಲಸವನ್ನು ಮೊತ್ತಮೊದಲಾಗಿ ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅಬೂಖಹಾಫನ ಮಗನು ಮಾಡಬೇಕೆಂದು ನೀವು ಬಯಸುತ್ತೀರಾ? ನಾನು ಈ ಸೈನ್ಯವನ್ನು ಖಂಡಿತ ಕಳುಹಿಸುವೆನು. ನೀವು ಶತ್ರುಗಳ ಸೈನ್ಯಗಳಿಗೆ ಹೆದರುತ್ತಿರುವಿರಾದರೆ, ನಿಸ್ಸಂಶಯವಾಗಿಯೂ ನನ್ನ ಜೊತೆಗೆ ಇರಬೇಕಾಗಿಲ್ಲ. ನಾನು ಒಬ್ಬಂಟಿಯಾಗಿ ಎಲ್ಲ ಶತ್ರುಗಳನ್ನು ಎದುರಿಸುವೆನು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದು **"ಯಅ್‌ಬುದೂನನೀ ಲಾ ಯುಶ್‌ರಿಕೂನ ಬೀ ಶೈಅನ್"** ಎಂಬುದರ ಸತ್ಯತೆಯ ಪುರಾವೆಯಾಗಿದೆ. ಎಂದರೆ ಅವರು ನನ್ನನ್ನು ಮಾತ್ರ ಆರಾಧಿಸುವರು ಮತ್ತು ನನ್ನೊಂದಿಗೆ ಯಾರನ್ನೂ

ಸಹಭಾಗಿಯನ್ನಾಗಿ ಮಾಡಲಾರರು. ಇಲ್ಲಿ ಖಿಲಾಫತಿನೊಂದಿಗೆ ನೆಲೆನಿಲ್ಲುವವರು ಮತ್ತು ಖಿಲಾಫತಿನ ಜೊತೆಗೆ ಇರುವವರನ್ನು ಉದ್ದೇಶಿಸಲಾಗಿದೆ.

ಹಝ್ರತ್ ಅಬೂಬಕರ್(ರ)ರ ತೀರ್ಮಾನದ ಅತ್ಯುತ್ತಮ ಪರಿಣಾಮಗಳ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ಸಹಾಬರ ಇಷ್ಟಕ್ಕೆ ವಿರುದ್ಧವಾಗಿ ಹಝ್ರತ್ ಅಬೂಬಕರ್(ರ) ಹಝ್ರತ್ ಉಸಾಮ ಬಿನ್ ಝೈದ್‌ರ ಸೈನ್ಯವನ್ನು ಕಳುಹಿಸಿದರು. ಅದು 40 ದಿನಗಳ ನಂತರ ವಿಜಯಶಾಲಿಯಾಗಿ ಮದೀನಕ್ಕೆ ಮರಳಿಬಂತು. ಅಲ್ಲಾಹನ ಸಹಾಯ ಮತ್ತು ವಿಜಯವು ವರ್ಷಿಸುವುದನ್ನು ಎಲ್ಲರೂ ಕಣ್ಣಾರೆ ನೋಡಿದರು. ಇದರ ನಂತರ ಹಝ್ರತ್ ಅಬೂಬಕರ್(ರ) ಸುಳ್ಳು ಪ್ರವಾದಿಗಳ ಪಿತೂರಿಯನ್ನು ತುಳಿದುಹಾಕಿದರು. ಈ ಪಿತೂರಿ ಪೂರ್ಣವಾಗಿ ಅಳಿದುಹೋಯಿತು. ಅನಂತರ ಇದೇ ಸ್ಥಿತಿ ಧರ್ಮತ್ಯಾಗಿಗಳದ್ದೂ ಆಯಿತು. ಅಲ್ಲಾಹನ ಏಕತೆ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರವಾದಿತ್ವವನ್ನು ಒಪ್ಪಿಕೊಂಡು ಕೇವಲ ಝಕಾತ್ ನೀಡುವುದನ್ನು ನಿರಾಕರಿಸುವವರ ವಿರುದ್ಧ ಹೇಗೆ ಖಡ್ಗವೆತ್ತುವುದು ಎಂದು ಭಿನ್ನಾಭಿಪ್ರಾಯ ಪ್ರಕಟಿಸಿದ ಸಹಾಬರೊಡನೆ ಹಝ್ರತ್ ಅಬೂಬಕರ್(ರ) ಅತ್ಯಂತ ಧೈರ್ಯದಿಂದ ಹೇಳಿದರು: ಇಂದು ಝಕಾತ್ ನೀಡದಿರಲು ಅನುಮತಿ ಕೊಟ್ಟರೆ, ಮೆಲ್ಲ ಮೆಲ್ಲನೆ ಜನರು ನಮಾಝ್ ಮತ್ತು ಉಪವಾಸವನ್ನು ಕೂಡ ಉಪೇಕ್ಷಿಸುವರು. ಇಸ್ಲಾಂ ಹೆಸರಿಗೆ ಮಾತ್ರ ಬಾಕಿಯುಳಿಯುವುದು. ಒಟ್ಟಿನಲ್ಲಿ, ಇಂತಹ ಪರಿಸ್ಥಿತಿಗಳಲ್ಲಿ ಹಝ್ರತ್ ಅಬೂಬಕರ್(ರ) ಝಕಾತ್ ನಿಷೇಧಿಗಳನ್ನು ಎದುರಿಸಿದರು ಮತ್ತು ಅದರ ಪರಿಣಾಮವೇನಾಯಿತು ಎಂದರೆ, ಆ ಕಾರ್ಯದಲ್ಲೂ ಹಝ್ರತ್ ಅಬೂಬಕರ್(ರ)ರಿಗೆ ವಿಜಯ ಮತ್ತು ದೇವ ಸಹಾಯ ಲಭಿಸಿತು. ಕೆಟ್ಟುಹೋಗಿದ್ದ ಜನರೆಲ್ಲರೂ ಸತ್ಯಮಾರ್ಗದ ಕಡೆಗೆ ಮರಳಿಬಂದರು.

(ಈ ವಿಷಯ ಮುಂದುವರೆಯುವುದು ಎಂದು ಹುಝೂರ್ ಹೇಳಿದರು.)

(ಅನಂತರ ಹುಝೂರ್ ದುಆ ಮಾಡಲು ಮನವಿ ಮಾಡುತ್ತಾ ಹೇಳಿದರು:) ಇಂದಿನ ಲೋಕದ ಸ್ಥಿತಿಗತಿಗಳಿಗಾಗಿ ಪ್ರಾರ್ಥನೆಗಳನ್ನು ಮಾಡುತ್ತಿರಿ. ಅದರಲ್ಲಿ ಕೊರತೆ ಮಾಡಬೇಡಿರಿ. ಲೋಕವು ತನ್ನ ಸೃಷ್ಟಿಕರ್ತನನ್ನು ಅರಿಯುವಂತಾಗಲಿ ಎಂಬ ಪ್ರಾರ್ಥನೆಯನ್ನು ವಿಶೇಷವಾಗಿ ಮಾಡಿರಿ. ಲೋಕವನ್ನು ನಾಶದಿಂದ ರಕ್ಷಿಸಲು ಪರಿಹಾರ ಮಾರ್ಗ ಇದೊಂದು ಮಾತ್ರವಾಗಿದೆ. ಅಲ್ಲಾಹನು ಕರುಣೆದೋರಲಿ ಮತ್ತು ನಮ್ಮ ದುಆಗಳನ್ನು ಸಹ ಅಲ್ಲಾಹನು ಸ್ವೀಕರಿಸಲಿ – ಆಮೀನ್.

(ಕೊನೆಯದಾಗಿ ಹುಝೂರ್ ಕೆನಡ ಜಾಮಿಅ ಅಹ್ಮದಿಯದ ಮಾಜಿ ಪ್ರಿನ್ಸಿಪಲ್ ಮತ್ತು ಕೆನಡದ ಮುಬಲ್ಲಿಗ್ ಇನ್‌ಚಾರ್ಜ್ ಆಗಿದ್ದ ದಿವಂಗತರಾದ ಸನ್ಮಾನ್ಯ ಮೌಲಾನ ಮುಬಾರಕ್ ನದೀರ್ ಸಾಹಿಬ್‌ರ ಬಗ್ಗೆಯೂ ಪ್ರಸ್ತಾಪಿಸುತ್ತಾ ಅವರು ಜಮಾಅತಿಗೆ ಮಾಡಿದ ಸೇವೆಗಳ ಬಗ್ಗೆ ವಿಶದವಾಗಿ ಹೇಳಿದರು. ಜುಮಾ ನಮಾಝಿನ ನಂತರ ಅವರ ಜನಾಝಾ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 18-03-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon